# ಕಳೆದುಕೊಂಡರೆ, ಮತ್ತೊಮ್ಮೆ ಗಳಿಕೆ

**ಜ್ಯೋತಿ ಗುಳೇದಗುಡ್ಡ**

12 ವರ್ಷಗಳಿಂದ ಗುಳೇದಗುಡ್ಡದ ಶ್ರೀಸಂಗಮೇಶ್ವರ ಸಾಂಸ್ಕೃತಿಕ ಹಾಗೂ ನಾಟ್ಯ ಸಂಘವನ್ನು ಜ್ಯೋತಿ ಗುಳೇದಗುಡ್ಡ ಅವರು ನಡೆಸಿಕೊಂಡು ಹೋಗುತ್ತಿದ್ದಾರೆ. ಆರ್ಥಿಕ ಏರಿಳಿತ ಸೇರಿದಂತೆ ಹಲವಾರು ಸಂಕಷ್ಟ ಎದುರಿಸಿದ್ದಾರೆ. ಆದರೂ, ನಾಟಕ ಕಂಪನಿ ಯಶಸ್ವಿಯಾಗಿ ಮುನ್ನಡೆಯುತ್ತಿದೆ. ಕಂಪನಿ ನಡೆಸಲು ಪತಿ ಬಸಯ್ಯ ಹಂಪಿಹೊಳಿಮಠ ಹಾಗೂ ಸಹೋದರ ಮಂಜು ಗುಳೇದಗುಡ್ಡ ಸಾಥ್ ನೀಡುತ್ತಿದ್ದಾರೆ.

‘ನಾಟಕ ಕಂಪನಿ ನಡೆಸುವುದು ಸುಲಭದ ಮಾತಲ್ಲ. ನಟನೆಯನ್ನೂ ಮಾಡುತ್ತಾ ಕಂಪನಿಯನ್ನೂ ನಿರ್ವಹಿಸಬೇಕು. ಕಂಪನಿಯಲ್ಲಿ ಕಲಾವಿದರು, ವಿವಿಧ ಕೆಲಸಗಾರರು ಸೇರಿ 40 ಮಂದಿ ಇದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಕಲಾವಿದರ ಸಂಭಾವನೆ ಹೆಚ್ಚಾಗಿದೆ. ಒಂದು ಬಾರಿ ಟೆಂಟ್ ತೆಗೆದು ಹಾಕಿದರೆ ₹2.50 ಲಕ್ಷ ಬೇಕಾಗುತ್ತದೆ. ಬನಶಂಕರಿ ಜಾತ್ರೆಯಂತಹ ಕ್ಯಾಂಪ್ ಇದ್ದರೆ ದಿನಕ್ಕೆ ₹60 ರಿಂದ ₹70 ಸಾವಿರ ಖರ್ಚಿದೆ. ಸಾದಾ ಕ್ಯಾಂಪ್ ಇದ್ದರೆ ₹25 ಸಾವಿರ ಬೇಕಾಗುತ್ತದೆ’ ಎಂದರು.

ಬಹಳಷ್ಟು ಜಾತ್ರೆಗಳಲ್ಲಿ ಕಲೆಕ್ಷನ್ ಸರಿಯಾಗಿ ಆಗದಿದ್ದರೆ, ಸಾಲವೇ ಗತಿಯಾಗುತ್ತದೆ. ಅಲ್ಲಲ್ಲಿ ಆಗುವ ನಷ್ಟವನ್ನು ಬಾದಾಮಿಯ ಬನಶಂಕರಿದೇವಿ ಜಾತ್ರೆಯಲ್ಲಿ ತುಂಬಿಕೊಳ್ಳುತ್ತೇವೆ. ಎಲ್ಲೇ ನಷ್ಟವಾದರೂ ಬನಶಂಕರಿದೇವಿ ಜಾತ್ರೆ ಭಕ್ತರು ಕೈ ಹಿಡಿಯುತ್ತಾರೆ. ಆದ್ದರಿಂದಲೇ ಹತ್ತಾರು ಕಂಪನಿಗಳು ಇಲ್ಲಿಗೆ ಬರುತ್ತವೆ.

ಚಲನಚಿತ್ರ, ಟಿವಿ ಕಲಾವಿದರನ್ನು ಕರೆಯಿಸುವುದರಿಂದ ಖರ್ಚು ಹೆಚ್ಚಾಗುತ್ತದೆ. ಹಾಗೆಯೇ ಕಲೆಕ್ಷನ್ ಕೂಡ ಹೆಚ್ಚಿರುತ್ತಿದೆ. ರಂಗಭೂಮಿ ನಟನೆಗೆ ಬೇಕಾದಂತಹ ಕಲಾವಿದರ ಕೊರತೆ ಇದೆ. ಕಲಾವಿದರನ್ನು ಉಳಿಸಿಕೊಂಡು ಹೋಗುವುದೇ ಸವಾಲಿನ ಕೆಲಸ. ನಟನೆಯನ್ನೇ ವೃತ್ತಿಯಾಗಿಸಿಕೊಂಡು ಜೀವನ ಸಾಗಿಸುವುದು ಕಷ್ಟವಾಗಿದೆ. ಕಂಪನಿ ನಡೆಸುವುದು ಮೊದಲಿಗಿಂತ ಕಷ್ಟವಾಗಿದೆ. ಆದರೆ, ರಂಗಭೂಮಿಯನ್ನೇ ಜೀವನವಾಗಿಸಿಕೊಂಡಿರುವುದರಿಂದ ಮುಂದುವರೆಸಿಕೊಂಡು ಹೋಗುತ್ತಿದ್ದೇವೆ.

ವರ್ಷ ಪೂರ್ತಿ ಬೇರೆ, ಬೇರೆ ಕಡೆ ಸಂಚಾರ ಮಾಡುವುದರಿಂದ ಮಕ್ಕಳ ಅಭ್ಯಾಸಕ್ಕೆ ತೊಂದರೆಯಾಗುತ್ತದೆ. ಮಕ್ಕಳ ಓದು, ಕುಟುಂಬದ ನಿರ್ವಹಣೆ ಜೊತೆಗೆ ನಾಟಕ ಕಂಪನಿಗಳನ್ನೂ ನಿರ್ವಹಿಸಬೇಕು. ಜೀವನದ ಇಳಿಗಾಲದಲ್ಲಿ ಕಲಾವಿದರಿಗೆ ಅವಕಾಶ ಕಡಿಮೆಯಾಗಿ ಹೆಚ್ಚಿನ ಪ್ರಮಾಣದಲ್ಲಿ ಸಂಕಷ್ಟಕ್ಕೆ ಸಿಲುಕುತ್ತಾರೆ.



ಜ್ಯೋತಿ ಗುಳೇದಗುಡ್ಡ



ಸುಜಾತಾ ಗುಬ್ಬಿ

# ಕಲೆಯ ಹುಚ್ಚು ಬಿಡುವುದಿಲ್ಲ

**ಸುಜಾತಾ ಗುಬ್ಬಿ**

ಎರಡು ದಶಕಗಳಿಂದ ಬಿಎಸ್‌ಆರ್ ನಾಟಕ ಸಂಘ ನಡೆಸಿಕೊಂಡು ಹೋಗುತ್ತಿದ್ದಾರೆ ಸುಜಾತಾ ಗುಬ್ಬಿ. ನಾಲ್ಕು ವರ್ಷದವಳಿದ್ದಾಗಿನಿಂದಲೇ ಅಭಿನಯ ಆರಂಭಿಸಿರುವ ಅವರು, ಕಂಪನಿ ನಿರ್ವಹಣೆಯ ಜೊತೆಗೆ ಇಂದಿಗೂ ಪ್ರಮುಖ ಪಾತ್ರಗಳಲ್ಲಿ ನಟನೆ ಮಾಡುತ್ತಿದ್ದಾರೆ.

ಕಲಾವಿದರಿಗೆ ಅನಾರೋಗ್ಯವಾಗಲಿ, ನಡುವೆಯೇ ಬಿಟ್ಟು ಹೋಗಲಿ, ಕೆಲವೇ ಪ್ರೇಕ್ಷಕರಿರಲಿ ಪ್ರತಿ ದಿನ ನಾಟಕದ ಪ್ರದರ್ಶನ ಮಾಡಲೇಬೇಕು. ಹಲವು ಜನರು ಸಾಲ ಮಾಡಿ ಕಂಪನಿಗಳನ್ನು ನಡೆಸುತ್ತಿದ್ದಾರೆ. ತಂದೆಯವರಾದ ರಾಜಣ್ಣ ಜೇವರ್ಗಿ ಅವರು ರಚಿಸಿಕೊಡುವ ಉತ್ತಮ ನಾಟಕಗಳು ಹಾಗೂ ನಿರ್ವಹಣೆಗೆ ಅವರು ನೀಡುವ ಸಾಥ್‌ನಿಂದಾಗಿ ಸಂಕಷ್ಟ ಎದುರಿಸಿಲ್ಲ’.

ಬನಶಂಕರಿ, ಕೊಟ್ಟೂರು, ಶಿರಸಿ, ಮೈಲಾರ ಸೇರಿದಂತೆ ಹಲವು ಜಾತ್ರೆಗಳಲ್ಲಿ ನಾಟಕ ಪ್ರದರ್ಶನ ಮಾಡಲಾಗುತ್ತದೆ. ಮಳೆಗಾಲ ನಾಟಕ ಕಂಪನಿಗಳವರಿಗೆ ಸಂಕಷ್ಟದ ಸಮಯ. ಕೆಲವೊಂದು ಸಲ ನಾಲ್ಕೈದು ಸಾವಿರ ಕಲೆಕ್ಷನ್ ಇದ್ದರೂ ನಾಟಕ ಆಡಬೇಕಾಗುತ್ತದೆ. ಕೆಲವೊಮ್ಮೆ ಪ್ರದರ್ಶನ ಮಾಡಲು ಸಾಧ್ಯವಾಗುವುದೇ ಇಲ್ಲ. ಆಗ ಕಲಾವಿದರಿಗೆ ಖರ್ಚಿಗೆ ಬೇಕಾದಷ್ಟು ಮಾತ್ರ ಹಣ ನೀಡಲಾಗುತ್ತದೆ. ದೊಡ್ಡ ಜಾತ್ರೆಗಳ ಕಲೆಕ್ಷನ್ ಸಂದರ್ಭದಲ್ಲಿ ಉಳಿದ ಹಣ ಕೊಡುತ್ತೇವೆ.

ಕಲೆಯನ್ನು ನಂಬಿಕೊಂಡು ಕಲಾವಿದರು ಜೀವನ ಮಾಡುತ್ತಾರೆ. ಅದರಲ್ಲಿ ಬಹಳಷ್ಟು ಮಂದಿ ಹೆಚ್ಚು ಓದಿಲ್ಲ. ಮಕ್ಕಳ ಓದಿಗೆ ತೊಂದರೆಯಾದರೂ, ಪೋಷಕರ ಬಳಿ ಬಿಟ್ಟು ಕಂಪನಿಗಳಲ್ಲಿ ನಟನೆ ಮಾಡುತ್ತಾರೆ. ಕಲಾ ಹುಚ್ಚು ಒಮ್ಮೆ ಹಿಡಿದರೆ ಬಿಡುವುದು ಬಹಳ ಕಡಿಮೆ. ಆದಾಯಕ್ಕಿಂತ ಕಲಾ ಪ್ರದರ್ಶನವನ್ನೇ ಮುಖ್ಯವಾಗಿಸಿಕೊಂಡು ಹಲವಾರು ಕಲಾವಿದರು ಆಗಿ ಹೋಗಿದ್ದಾರೆ. ಕೆಲವರು ನಮ್ಮಿಂದಲೇ ನಾಟಕ ನಡೆಯುತ್ತಿದೆ ಎನ್ನುವ ಮನೋಭಾವದವರೂ ಇದ್ದಾರೆ.

ನಾಟಕ ಕಂಪನಿಗಳ ಮಾಲೀಕರು ಹಾಗೂ ಕಲಾವಿದರು ಎತ್ತಿನ ಗಾಡಿಯ ಎರಡು ಚಕ್ರಗಳಿದ್ದ ಹಾಗೆ. ಎರಡೂ ಚೆನ್ನಾಗಿದ್ದಾಗಲೇ ಬಂಡಿ ಮುಂದೆ ಸಾಗುತ್ತದೆ. ನಮ್ಮಿಂದ ಎನ್ನುವುದು ಇಬ್ಬರಿಗೂ ಇರಬಾರದು. ಪರಸ್ಪರ ಹೊಂದಾಣಿಕೆಯಿಂದ ಸಾಗಬೇಕು.

ನಾಟಕಗಳ ವೀಕ್ಷಣೆಗೆ ಬರುವ ಪ್ರೇಕ್ಷಕರು ಕೆಲವು ನಿರೀಕ್ಷೆಗಳನ್ನು ಇಟ್ಟುಕೊಂಡು ಬರುತ್ತಾರೆ. ಆ ನಿರೀಕ್ಷೆಗಳಿಗೆ ತಕ್ಕಂತೆ ನಾಟಕ ಪ್ರದರ್ಶನ ಮಾಡಬೇಕು. ಆಗಲೇ ಯಶಸ್ಸು ಗಳಿಸಲು ಸಾಧ್ಯ. ಡಬಲ್ ಮೀನಿಂಗ್ ಡೈಲಾಗ್‌ನಿಂದ ಕುಟುಂಬ ಸಮೇತ ಬರುತ್ತಿದ್ದ ಪ್ರೇಕ್ಷಕರು ನಾಟಕಗಳಿಂದ ದೂರ ಸರಿದಿದ್ದರು. ಈಗ ಕುಟುಂಬ ಸಮೇತ ಬಂದು ನೋಡುವಂತಹ ನಾಟಕಗಳತ್ತ ಎಲ್ಲರೂ ಗಮನ ಹರಿಸಿರುವುದರಿಂದ ಮತ್ತೆ ಪ್ರೇಕ್ಷಕರು ಬರಲಾರಂಭಿಸಿದ್ದಾರೆ. ನಾಟಕ ಕ್ಷೇತ್ರಕ್ಕೆ ಉಜ್ವಲ ಭವಿಷ್ಯವಿದೆ ■